# ಮೆ: ಸತೀಶ ಸಕ್ಕರೆ ಕಾರ್ಖಾನೆ ನಿಯಮಿತ,

ಬೀರನಗಡ್ಡಿ ಮತ್ತು ಹುಣಶ್ಯಾಳ ಪಿ. ಜಿ. ಗ್ರಾಮಗಳು,

ಗೋಕಾಕ ತಾಲ್ಲೂಕು, ಜಿಲ್ಲೆ ಬೆಳಗಾವಿ, ಕರ್ನಾಟಕ ರಾಜ್ಯ.

**ಯೋಜನೆಯ ಕರಡು ಪರಿಸರ ಅಧ್ಯಯನ ವರದಿಯ**

**ಕಾರ್ಯಕಾರಿ ಸಾರಾಂಶ**

ಉದ್ದೇಶಿತ ಕಬ್ಬು ನುರಿಸುವ ಸಾಮರ್ಥ್ಯದ ವಿಸ್ತೀರ್ಣ

(10000 ಟನ್‌ದಿಂದ 15000 ಟನ್ ಪ್ರತಿದಿನ)

ಸಹ ವಿದ್ಯುತ್ ಘಟಕದ ಸಾಮರ್ಥ್ಯದ ವಿಸ್ತೀರ್ಣ

45 ಮೆಗಾವ್ಯಾಟ್‌ನಿಂದ 80 ಮೆಗಾವ್ಯಾಟ್ ಮತ್ತು

ಮದ್ಯಸಾರ ತಯಾರಿಸುವ ಘಟಕದ ಸಾಮರ್ಥ್ಯದ ವಿಸ್ತೀರ್ಣ 60 ಸಾವಿರ ಲೀಟರ್ ಪ್ರತಿದಿನದಿಂದ 120 ಸಾವಿರ ಲೀಟರ್ ಪ್ರತಿದಿನ

ಮತ್ತು ಮದ್ಯಸಾರ ಘಟಕದ ತ್ಯಾಜ್ಯ ನೀರನ್ನು ದಹಿಸುವ ಹಬೆ ಯಂತ್ರದಿಂದ 4 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಘಟಕಗಳ ಸ್ಥಾಪನೆ ಕುರಿತು.

## 1.0. ಯೋಜನೆಯ ಉದ್ದೇಶ :

ಮೆ: ಸತೀಶ ಸಕ್ಕರೆ ಕಾರ್ಖಾನೆಯು ಅಕ್ಟೋಬರ್–2002 ರಿಂದ ಕಾರ್ಯನಿರ್ವಹಿಸುತ್ತಿದೆ. ಕಾರ್ಖಾನೆಯ ಹಾಲಿ ಕಬ್ಬು ಅರೆಯುವ ಸಾಮರ್ಥ್ಯ ಪ್ರತಿ ದಿನ 10000 ಟನ್‌ಗಳಾಗಿದೆ. ಕಾರ್ಖಾನೆಯು 45 ಮೆ. ವ್ಯಾಟ್ ಸಾಮರ್ಥ್ಯದ ಸಹ ವಿದ್ಯುತ್ ಘಟಕ ಮತ್ತು 60 ಸಾವಿರ ಲೀಟರ್ ಪ್ರತಿದಿನ ಸಾಮರ್ಥ್ಯದ ಮದ್ಯಸಾರ ತಯಾರಿಸುವ ಘಟಕವನ್ನು ಹೊಂದಿದೆ.

ಸಕ್ಕರೆ ಉದ್ಯಮದ ಬದಲಾಗುತ್ತಿರುವ ಸನ್ನಿವೇಶದಲ್ಲಿ, ಕಾರ್ಖಾನೆಯು ತನ್ನ ಕಬ್ಬು ಅರೆಯುವ ಸಾಮರ್ಥ್ಯವನ್ನು 10000 ಟನ್‌ದಿಂದ 15000 ಟನ್ ಪ್ರತಿ ದಿನಕ್ಕೆ ಹೆಚ್ಚಿಸಲು ಉದ್ದೇಶಿಸಿದೆ. ಇದಲ್ಲದೇ ಸಹ ವಿದ್ಯುತ್ ಘಟಕದ ಸಾಮರ್ಥ್ಯವನ್ನು 45 ಮೆಗಾವ್ಯಾಟ್‌ನಿಂದ 80 ಮೆಗಾವ್ಯಾಟ್‌ಗಳಿಗೆ ಹೆಚ್ಚಿಸಲು ಉದ್ದೇಶಿಸಿದೆ. ಉದ್ದೇಶಿತ ಯೋಜನೆಯ ವಿಸ್ತೀರ್ಣದಿಂದ ಲಭ್ಯವಾಗುವ ಕಾಕಂಬಿಯನ್ನು ಬಳಸಲು 60 ಸಾವಿರ ಲೀಟರ್ ಪ್ರತಿದಿನ ಸಾಮರ್ಥ್ಯದ ಮದ್ಯಸಾರ ತಯಾರಿಸುವ ಘಟಕವನ್ನು 120 ಸಾವಿರ ಲೀಟರ್ ದಿನಕ್ಕೆ ಹೆಚ್ಚಿಸಲು ಉದ್ದೇಶಿಸಿದೆ. ಮದ್ಯಸಾರ ಘಟಕಕ್ಕೆ ನಿರಂತರ ಹುಳಿಯುವಿಕೆ ತಂತ್ರಜ್ಞಾನವನ್ನು ಅಳವಡಿಸಲಾಗುವುದು. ಮದ್ಯಸಾರ ಘಟಕದಿಂದ ಬರುವಂತಹ ತ್ಯಾಜ್ಯ ನೀರನ್ನು ಹಬೆಯಂತ್ರದಲ್ಲಿ ದಹಿಸಿ 4 ಮೆಗಾವ್ಯಾಟ್ ವಿದ್ಯುತ್‌ನ್ನು ಉತ್ಪಾದಿಸಲಾಗುವುದು.

ಮೆ: ಸತೀಶ ಸಕ್ಕರೆ ಕಾರ್ಖಾನೆಯು ಉದ್ದೇಶಿತ ಯೋಜನೆಗಾಗಿ 266 ಕೋಟಿ ರೂಪಾಯಿಗಳಷ್ಟು ಬಂಡವಾಳವನ್ನು ಹೂಡುವುದು. ಇದರಲ್ಲಿ ಪರಿಸರ ಕಾರ್ಯನಿರ್ವಹಣಾ ವ್ಯವಸ್ಥೆಗಾಗಿ 45 ಕೋಟಿ ರೂಪಾಯಿಗಳನ್ನು ಕಾಯ್ದಿರಿಸಲಾಗಿದೆ.

### ಕೈಗಾರಿಕೆ ಇರುವ ಸ್ಥಳ :

ಮೆ: ಸತೀಶ ಸಕ್ಕರೆ ಕಾರ್ಖಾನೆಯ ಉದ್ದೇಶಿತ ವಿಸ್ತೀರ್ಣದ ಘಟಕವು ಬೀರನಗಡ್ಡಿ ಮತ್ತು ಹುಣಶ್ಯಾಳ ಪಿ. ಜಿ. ಗ್ರಾಮಗಳು, ಗೋಕಾಕ ತಾಲ್ಲೂಕು, ಬೆಳಗಾವಿ ಜಿಲ್ಲೆಯಲ್ಲಿ ಇರುತ್ತದೆ. ನಿಯೋಜಿತ ಸ್ಥಳವು ಸಮುದ್ರ ಪಾತಳಿಯಿಂದ 575 ಮೀಟರ್ ಎತ್ತರದಲ್ಲಿದೆ. ನಿಯೋಜಿತ ಸ್ಥಳವು $16^0$14'24" - $16^0$14'58" ಉತ್ತರ ಅಕ್ಷಾಂಶ ಮತ್ತು $74^0$ 53' 12" - $74^0$ 53' 55" ಪೂರ್ವ ರೇಖಾಂಶಗಳ ಮಧ್ಯದಲ್ಲಿದೆ. ಉದ್ದೇಶಿತ ಘಟಕಕ್ಕೆ

ಕಲ್ಲೊಳ್ಳಿ ಸಮೀಪದ ಗ್ರಾಮವಾಗಿದ್ದು ಉತ್ತರ–ಪಶ್ಚಿಮ ದಿಕ್ಕಿನಲ್ಲಿ 2.2 ಕಿಮೀ ದೂರದಲ್ಲಿದೆ. ಉದ್ದೇಶಿತ ಸ್ಥಳದಿಂದ ಬೆಳಗಾವಿ ನಗರವು ದಕ್ಷಿಣ–ಪಶ್ಚಿಮಕ್ಕೆ 72 ಕಿ.ಮೀ ದೂರದಲ್ಲಿದೆ. ಘಟಪ್ರಭಾ ರೈಲು ನಿಲ್ದಾಣವು ಸಮೀಪದ ರೈಲು ನಿಲ್ದಾಣವಾಗಿದ್ದು ಯೋಜನೆಯ ಸ್ಥಳದಿಂದ 13.5 ಕಿಮೀ ಪಶ್ಚಿಮ ದಿಕ್ಕಿನಲ್ಲಿದೆ. ಬೆಂಗಳೂರು - ಪುಣೆ (NH-4) ರಾಷ್ಟ್ರೀಯ ಹೆದ್ದಾರಿಯು ನಿಯೋಜಿತ ಸ್ಥಳದಿಂದ ಪಶ್ಚಿಮಕ್ಕೆ 39.6 ಕಿ.ಮೀ ದೂರದಲ್ಲಿದೆ.

## 1.2. ಕೈಗಾರಿಕೆಗೆ ಬೇಕಾಗುವ ಸೌಲಭ್ಯಗಳು :

ಕಬ್ಬು ನುರಿಸುವ ಸಾಮರ್ಥ್ಯದ ವಿಸ್ತೀರ್ಣದ ನಂತರ, ಕಾರ್ಖಾನೆಗೆ ಪ್ರತಿದಿನ 15000 ಟನ್ ಕಬ್ಬು ಬೇಕಾಗುವುದು. ಇದನ್ನು ಕಾರ್ಖಾನೆಯ ಕಾರ್ಯವ್ಯಾಪ್ತಿಯಲ್ಲಿ ಬರುವ ಗ್ರಾಮಗಳಿಂದ ಪಡೆಯಲು ಉದ್ದೇಶಿಸಲಾಗಿದೆ.

ಸಹ ವಿದ್ಯುತ್ ಘಟಕದ ಸಾಮರ್ಥ್ಯದ ವಿಸ್ತೀರ್ಣದ ನಂತರ ಕಾರ್ಖಾನೆಗೆ ಪ್ರತಿದಿನ 4000 ಟನ್ ಕಬ್ಬಿನ ಸಿಪ್ಪೆ (ಬಗ್ಯಾಸ್) ಬೇಕಾಗುವುದು. ಹಬೆ ಯಂತ್ರಗಳಿಗೆ ಕಬ್ಬಿನ ಸಿಪ್ಪೆ ಮತ್ತು ಕಲ್ಲಿದ್ದಲನ್ನು ಇಂಧನವಾಗಿ ಬಳಸಲಾಗುವುದು. ಕಬ್ಬಿನ ಸಿಪ್ಪೆ ಮತ್ತು ಕಲ್ಲಿದ್ದಲನ್ನು ಇಂಧನವನ್ನಾಗಿ ಬಳಸಿದಾಗ ಬೇಕಾಗುವ ಕಬ್ಬಿನ ಸಿಪ್ಪೆಯ ಪ್ರಮಾಣ 2677 ಟನ್ ಪ್ರತಿದಿನ ಹಾಗು ಕಲ್ಲಿದ್ದಲು 297 ಟನ್ ಪ್ರತಿದಿನ ಎಂದು ಅಂದಾಜಿಸಲಾಗಿದೆ. ಕಬ್ಬಿನ ಸಿಪ್ಪೆಯ ಲಭ್ಯತೆಯ ಪ್ರಮಾಣ ಕಡಿಮೆ ಇದ್ದಾಗ ಕಲ್ಲಿದ್ದಲನ್ನು ಇಂಧನವನ್ನಾಗಿ ಬಳಸಲಾಗುವುದು. ಕಲ್ಲಿದ್ದಲನ್ನು ಮಂಗಳೂರು ಬಂದರಿನಿಂದ ಪಡೆಯಲಾಗುವುದು.

ಉದ್ದೇಶಿತ ಮದ್ಯಸಾರ ಘಟಕಕ್ಕೆ ಪ್ರತಿದಿನ 420 ರಿಂದ 480 ಟನ್ ಕಾಕಂಬಿ (Molasses) ಬೇಕಾಗಬಹುದೆಂದು ಅಂದಾಜಿಸಲಾಗಿದೆ. ನುರಿಸುವ ಸಾಮರ್ಥ್ಯದ ವಿಸ್ತೀರ್ಣದ ನಂತರ ಕಾರ್ಖಾನೆಯಿಂದ 600 ಟನ್ ಕಾಕಂಬಿ ಉತ್ಪಾದನೆಯಾಗುವುದು. ಹೆಚ್ಚುವರಿ ಬೇಕಾಗುವ ಕಾಕಂಬಿಯನ್ನು ಸುತ್ತಲಿನ ಸಕ್ಕರೆ ಕಾರ್ಖಾನೆಗಳಿಂದ ಪಡೆಯಲು ಉದ್ದೇಶಿಸಲಾಗಿದೆ.

ಕಾರ್ಖಾನೆಯು ಈಗಾಗಲೇ 64.496 ಹೆಕ್ಟೇರ್ ಜಮೀನನ್ನು ಹೊಂದಿದೆ. ಹಾಲಿ ಸಕ್ಕರೆ ಕಾರ್ಖಾನೆ, ಸಹ ವಿದ್ಯುತ್ ಮತ್ತು ಮದ್ಯಸಾರ ಘಟಕಕ್ಕಾಗಿ ಸುಮಾರು 19.70 ಹೆಕ್ಟೇರ್ ಜಮೀನನ್ನು ಉಪಯೋಗಿಸಲಾಗಿದೆ. ಒಟ್ಟು ಜಮೀನಿನಲ್ಲಿ ಸುಮಾರು 20.22

ಹೆಕ್ಟೇರಗಳನ್ನು ಹಸಿರು ಪಟ್ಟಿಗಾಗಿ ಮೀಸಲಾಗಿರಿಸಿದೆ. ಕಾರ್ಖಾನೆಯ ಹತ್ತಿರ 20.54 ಹೆಕ್ಟೇರಗಳಷ್ಟು ಖಾಲಿ ಜಾಗ ಲಭ್ಯವಿದೆ. ಸಕ್ಕರೆ ಕಾರ್ಖಾನೆಯ ಮತ್ತು ಸಹ ವಿದ್ಯುತ್ ಘಟಕಗಳ ವಿಸ್ತೀರ್ಣ ಮತ್ತು ಮದ್ಯಸಾರ ಘಟಕದ ವಿಸ್ತೀರ್ಣವನ್ನು ಈ ಖಾಲಿ ಜಾಗದಲ್ಲಿ ಕಟ್ಟಲು ಉದ್ದೇಶಿಸಲಾಗಿದೆ. ಹೀಗಾಗಿ ಉದ್ದೇಶಿತ ಘಟಕಗಳಿಗೆ ಹೆಚ್ಚಿನ ಭೂಮಿಯ ಅವಶ್ಯಕತೆ ಇರುವುದಿಲ್ಲ.

ಉದ್ದೇಶಿತ ಯೋಜನೆಗೆ ಬೇಕಾಗುವ ಒಟ್ಟು ನೀರಿನ ಅವಶ್ಯಕತೆ ಪ್ರತಿದಿನ 14621 ಘನ ಮೀಟರಗಳಾಗಿದ್ದು ಇದನ್ನು ಘಟಪ್ರಭಾ ನದಿಯಿಂದ ಪಡೆಯಲು ಉದ್ದೇಶಿಸಲಾಗಿದೆ.

ಉದ್ದೇಶಿತ ಯೋಜನೆಗೆ ಬೇಕಾಗುವ ವಿದ್ಯುತ್ತಿನ ಅವಶ್ಯಕತೆ ಪ್ರತಿದಿನ 22 ಮೆಗಾ ವ್ಯಾಟ್‌ಗಳಾಗಿದೆ. ಇದನ್ನು ಸಹ ವಿದ್ಯುತ್ ಘಟಕಗಳಿಂದ ಪಡೆಯಲಾಗುವುದು.

ತುರ್ತು ಪರಿಸ್ಥಿತಿಯ ವಿದ್ಯುತ್ ಅವಶ್ಯಕತೆಗಾಗಿ 500 ಕೆವಿಎ ಸಾಮರ್ಥ್ಯದ ಎರಡು ಡಿಸೇಲ್ ಜನರೇಟರಗಳನ್ನು ಬೆಂಗಾವಲಾಗಿ ಇರಿಸಲು ಉದ್ದೇಶಿಸಲಾಗಿದೆ.

ಕಾರ್ಖಾನೆಯು ಈಗಾಗಲೇ ಮೂರು ಹಬೆ ಯಂತ್ರಗಳನ್ನು (Boilers) ಹೊಂದಿದೆ. ಇದರಿಂದ 220 ಟನ್ ಪ್ರತಿ ಘಂಟೆಯಷ್ಟು ಹಬೆಯನ್ನು ಉತ್ಪಾದಿಸಲಾಗುತ್ತಿದೆ. ಈ ಹಬೆ ಯಂತ್ರವು ಹಾಲಿ ಕಾರ್ಖಾನೆ ಮತ್ತು ಸಹ ವಿದ್ಯುತ್ ಘಟಕಕ್ಕೆ ಬೇಕಾಗುವ ಹಬೆಯನ್ನು ಪೂರೈಸುತ್ತಿದೆ. ಕಾರ್ಖಾನೆಯ ಉದ್ದೇಶಿತ ಯೋಜನೆಗೆ ಬೇಕಾಗುವ ಹಬೆಯ ಅವಶ್ಯಕತೆಯನ್ನು ಪೂರೈಸಲು, ಎರಡು 100 ಟನ್ ಮತ್ತು ಎರಡು 20 ಟನ್ ಹಬೆಯಂತ್ರಗಳನ್ನು ಸ್ಥಾಪಿಸಲಾಗುವುದು.

100 ಟನ್ ಹಬೆ ಯಂತ್ರಗಳಿಗೆ ಕಾರ್ಖಾನೆಯಿಂದ ಬರುವ ಕಬ್ಬಿನ ಸಿಪ್ಪೆಯನ್ನು ಹಾಗೂ ಕಲ್ಲಿದ್ದಲನ್ನು ಇಂಧನವಾಗಿ ಬಳಸಲಾಗುವುದು. 20 ಟನ್ ಹಬೆ ಯಂತ್ರಗಳಿಗೆ ಕಲ್ಲಿದ್ದಲು ಹಾಗೂ ಮದ್ಯಸಾರ ಘಟಕದಿಂದ ಬರುವಂತ ತ್ಯಾಜ್ಯ ನೀರನ್ನು ( ತ್ಯಾಜ್ಯ ನೀರಿನಲ್ಲಿರುವ ಪ್ರಮಾಣವನ್ನು ಕಡಿಮೆಗೊಳಿಸಲು ಅದನ್ನು ಕುದಿಸಲಾಗುವುದು) ಇಂಧನವನ್ನಾಗಿ ಬಳಸಲಾಗುವುದು.

ಕಾರ್ಖಾನೆಯು ಈಗಾಗಲೇ 1350 ಪರಿಣಿತ ಮತ್ತು ಅಪರಿಣಿತ ಕೆಲಸಗಾರರನ್ನು ಹೊಂದಿದ್ದು ಉದ್ದೇಶಿತ ಯೋಜನೆಗೆ 235 ಜನರನ್ನು ನೇಮಕ ಮಾಡಿಕೊಳ್ಳಲಾಗುವುದು.

## 2.1. ಕರಡು ಪರಿಸರ ಅಘಾತ ವರದಿಯ ಉದ್ದೇಶ.

**(ಅ)** ಉದ್ದೇಶಿತ ಕೈಗಾರಿಕೆಯಿಂದ ಪರಿಸರದ ಮೇಲಾಗುವ ದುಷ್ಪರಿಣಾಮಗಳನ್ನು ಯೋಜನಾ ಹಂತದಲ್ಲೇ ಗುರುತಿಸುವುದು. ದುಷ್ಪರಿಣಾಮಗಳನ್ನು ಊಹೆ ಮಾಡಿ, ಯೋಜನಾ ಹಂತದಲ್ಲಿ, ಮಿತ ಖರ್ಚಿನಲ್ಲಿ ದುಷ್ಪರಿಣಾಮಗಳನ್ನು ಕಡಿಮೆ ಮಾಡುವ ಪರಿಸರ ವ್ಯವಸ್ಥೆಯನ್ನು ನಿರೂಪಿಸುವುದು.

**(ಆ)** ಯೋಜನೆಯ ಆಳವಾದ ಅರಿವನ್ನು ಹೊಂದುವುದು ಮತ್ತು ತಯಾರಿಕಾ ಕಾರ್ಯಾಗತಿಯಲ್ಲಿ ಉದ್ಭವಿಸಬಹುದಾದ ಸಂಭವನೀಯ ಮಾಲಿನ್ಯದ ಮೂಲಗಳನ್ನು ಗುರುತಿಸುವುದು.

**(ಇ)** ನಿಯೋಜಿತ ಸ್ಥಳದಿಂದ 10 ಕಿ.ಮೀ. ತ್ರಿಜ್ಯ ವ್ಯಾಪ್ತಿಯಲ್ಲಿರುವ ಪ್ರಚಲಿತ ಪರಿಸರದ ಸರ್ವೇಕ್ಷಣೆ ನೆಡೆಸುವುದು. ಪರಿಸರದ ಗುಣವಾಚಕಗಳಾದ ಗಾಳಿ, ಶಬ್ದ ಪಾತಳಿ, ನೀರಿನ ಗುಣಮಟ್ಟ, ಹವಾಮಾನ ಮತ್ತು ವ್ಯಾಪ್ತಿ ಪ್ರದೇಶದ ಸಾಮಾಜಿಕ ಹಾಗೂ ಆರ್ಥಿಕ ವಾತಾವರಣದ ಮೂಲ ಮಾಹಿತಿಯನ್ನು ಸಂಗ್ರಹಿಸುವುದು.

**(ಈ)** ಸುತ್ತಮುತ್ತಲಿನ ಪರಿಸರದ ಮೇಲೆ ಉದ್ದೇಶಿತ ಯೋಜನೆಯಿಂದಾಗುವ ಪರಿಣಾಮಗಳನ್ನು ಅಂದಾಜು ಮಾಡುವುದು.

**(ಉ)** ಪರಿಸರದ ಗುಣಮಟ್ಟವನ್ನು ಕಾಪಾಡಲು ಪರಿಸರ ಕಾರ್ಯನಿರ್ವಹಣೆಯ ವ್ಯವಸ್ಥೆಯ ನಕ್ಷೆಯನ್ನು ತಯಾರಿಸುವುದು.

**(ಊ)** ಪರಿಸರದ ಗುಣಮಟ್ಟದಲ್ಲಿ ಯೋಜನೆಯ ನಂತರ ಆಗುವ ವ್ಯತ್ಯಾಸವನ್ನು ಪರಿಣಾಮಕಾರಿಯಾಗಿ ಗುರುತಿಸುವಂತಹ ಕಾರ್ಯತಂತ್ರವನ್ನು ರೂಪಿಸಿಕೊಂಡು ಇದರಿಂದ ಮುಂದೆ ಸಂಭವಿಸಬಹುದಾದ ವ್ಯತ್ಯಾಸಗಳನ್ನು ನಿವಾರಿಸುವುದು.

## 2.2. ಪರಿಸರ ಆಘಾತ ವರದಿಯ ಕಾರ್ಯವಿಧಾನ :

ಮೇಲೆ ಕಾಣಿಸಿದಂತ ಮೂಲ ಮಾಹಿತಿಗಳನ್ನು (ಗಾಳಿ, ಶಬ್ದ, ನೀರು, ಮಣ್ಣು) ಪರಿಸರ ಮತ್ತು ಅರಣ್ಯ ಮಂತ್ರಾಲಯ, ಭಾರತ ಸರ್ಕಾರ ಮತ್ತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಇವರ ಕಾನೂನುಗಳನ್ವಯ ಕೈಗಾರಿಕೆಯ ಕಾರ್ಯಾಚರಣೆಯ ಸ್ಥಾಪನೆಗೆ (ಸಿ.ಎಫ್.ಇ.) ಅನುಮತಿ ಪಡೆಯಲಿಕ್ಕೆ ವರ್ಷದ ಒಂದು ಹಂಗಾಮಿಗಾಗಿ ಪರಿಸರ ಅಧ್ಯಯನ ನಡೆಸಲು ತೀರ್ಮಾನಿಸಲಾಯಿತು. ಅದರಂತೆ ಉದ್ದೇಶಿತ ಕೈಗಾರಿಕೆಯ ಸಲುವಾಗಿ ಪರಿಸರ ಅಧ್ಯಯನವನ್ನು ಡಿಸೆಂಬರ 2013ರಿಂದ ಫೆಬ್ರುವರಿ 2014ರ ಅವಧಿಯಲ್ಲಿ ಮಾಡಲಾಗಿದೆ. ಪರಿಸರದ ಅಧ್ಯಯನಕ್ಕಾಗಿ ಯೋಜಿತ ಸ್ಥಳದಿಂದ 10 ಕಿ.ಮೀ ತ್ರಿಜ್ಯಳತೆಯ ಪ್ರದೇಶವನ್ನು ಆಯ್ಕೆ ಮಾಡಲಾಗಿದೆ. ಅಧ್ಯಯನ ಪ್ರದೇಶವನ್ನು ಭಾರತೀಯ ಸರ್ವೇಕ್ಷಣಾ ಸಂಸ್ಥೆಯ (ಸರ್ವೆ ಆಫ್ ಇಂಡಿಯಾ) ಟೋಪೋಶೀಟ್ ಸಂಖ್ಯೆಗಳು 47ಎಲ್/15 ಮತ್ತು 47ಎಲ್/16 ಇವುಗಳಲ್ಲಿ ಗುರುತಿಸಬಹುದಾಗಿದೆ.

## 2.3. ತಳಹದಿ ಅಧ್ಯಯನದ ಪಲಿತಾಂಶಗಳು :

ಯೋಜನೆಗೆ ಮೀಸಲಿಟ್ಟ ಪ್ರದೇಶ ಮತ್ತು ಅಕ್ಕಪಕ್ಕದ 10 ಕಿ.ಮೀ ತ್ರಿಜ್ಯದಲ್ಲಿರುವ ಹವೆ, ನೀರು ಹಾಗೂ ಮಣ್ಣಿನ ಗುಣಮಟ್ಟ, ಶಬ್ದ ಪಾತಳಿ, ಸಸ್ಯರಾಶಿ ಮತ್ತು ಪ್ರಾಣಿಗಳ ಬಗ್ಗೆ ಸರ್ವೇಕ್ಷಣೆಯನ್ನು ನಡೆಸಲಾಯಿತು. ಇದರ ಫಲಿತಾಂಶಗಳು ಕೆಳಗಿನಂತಿವೆ.

**(ಅ) ವಾಯುವೇಗ ಮತ್ತು ದಿಕ್ಕು. :**

ಅಧ್ಯಯನದ ಅವಧಿಯಲ್ಲಿ ಪ್ರಬಲವಾದ ವಾಯುದಿಶೆಯು ಪ್ರತಿಶತ 60.39 ರಷ್ಟಿದ್ದು, ಗಾಳಿ ಪ್ರತಿ ಘಂಟೆಗೆ 15 ಕಿಮೀ. ವೇಗದಲ್ಲಿ ಬೀಸುತ್ತಿತ್ತು. ಪ್ರಶಾಂತ ಸ್ಥಿತಿಯು ಪ್ರತಿಶತ 6.48 ರಷ್ಟಿತ್ತು.

**(ಬ) ವಾಯು ಪರಿಸರ :**

ಅಧ್ಯಯನ ಪ್ರದೇಶದ ವಾಯು ಪರಿಸರವನ್ನು ತೇಲಾಡುವ ಘನ ಪದಾರ್ಥಗಳು (Particulate matter 10), (Particulate matter 2.5), ಗಂಧಕದ ಡೈ ಆಕ್ಸೈಡ್ (SOx) ಹಾಗೂ ಸಾರಜನಕದ ಅಕ್ಸೈಡ್‌ಗಳ (NOx) ಪ್ರಮಾಣವನ್ನು ಅಳೆಯುವ ಸಲುವಾಗಿ ಅಭ್ಯಸಿಸಲಾಯಿತು. ಹವೆ ಮಾಹಿತಿಯ ಸರ್ವೇಕ್ಷಣೆಯನ್ನು ಮಾಲಿನ್ಯ ನಿಯಂತ್ರಣ ಮಂಡಳಿಯ ಮಾನಕಗಳನ್ವಯ ವಿವಿಧ ಸ್ಥಳಗಳಿಂದ ಆರು ಮಾದರಿಗಳನ್ನು (ಗಾಳಿಯ ದಿಕ್ಕು ಹಾಗೂ ವೇಗದ ಮೇಲೆ ಅವಲಂಬಿತವಾಗಿರುತ್ತವೆ) ಸಂಗ್ರಹಿಸಲಾಯಿತು. ಇವುಗಳ

ಗರಿಷ್ಠ ಪ್ರಮಾಣವು ಕ್ರಮವಾಗಿ 51.5, 26.8, 15.8 ಮತ್ತು 16.7 ಮೈಕ್ರೋಗ್ರಾಮ್ ಪ್ರತಿ ಘ.ಮೀ.ಗಳಷ್ಟಿರುತ್ತದೆ. ಈ ಅಳತೆಗಳು ವಾಸಸ್ಥಾನ ಮತ್ತು ಹಳ್ಳಿಗಾಡಿನ ಹವಾ ಗುಣಮಟ್ಟಕ್ಕಾಗಿ ರಾಷ್ಟ್ರೀಯ ಹವಾ ಗುಣಮಟ್ಟವು (NAAQ Standards) ನಿರ್ಧರಿಸಿದ ಮಾನಕಗಳ ಮಿತಿಯೊಳಗಿರುತ್ತವೆ.

**(ಕ) ಶಬ್ದ ಪರಿಸರ :**

ಅಧ್ಯಯನ ಪ್ರದೇಶದಲ್ಲಿ ಆರು ಸ್ಥಳಗಳಲ್ಲಿ ಶಬ್ದ ಮಾದರಿಗಳನ್ನು ಸಂಗ್ರಹಿಸಲಾಯಿತು. ಶಬ್ದ ಪಾತಳಿಯ ಗರಿಷ್ಠ ಪ್ರಮಾಣವು ಹಗಲಿನಲ್ಲಿ 51.6 ಡೆಸಿಬಲ್ಸ್ ಮತ್ತು ರಾತ್ರಿಯಲ್ಲಿ 44.4 ಡೆಸಿಬಲ್ಸ್‌ಗಳಷ್ಟಾಗಿತ್ತು. ಸಂಗ್ರಹಿಸಿದ ಶಬ್ದ ಮಾದರಿಗಳು ಕೇಂದ್ರೀಯ ಮಾಲಿನ್ಯ ನಿಯಂತ್ರಣ ಮಂಡಳಿ (CPCB Noise Standards) ನಿರ್ಧರಿಸಿದ ಮಾನಕಗಳ ಮಿತಿಯೊಳಗಿರುತ್ತವೆ.

**(ಡ) ಜಲ ಪರಿಸರ :**

ಅಧ್ಯಯನ ಪ್ರದೇಶದಲ್ಲಿರುವ ಜಲದ ಗುಣಮಟ್ಟವನ್ನು ನಿಶ್ಚಯಿಸಲು ಹತ್ತು ನೀರಿನ ಮಾದರಿಗಳನ್ನು ಸಂಗ್ರಹಿಸಲಾಯಿತು. ನೀರಿನ ಮಾದರಿಗಳನ್ನು ಭೌತಿಕ, ರಾಸಾಯನಿಕ ವೈಲಕ್ಷಣಗಳಿಗಾಗಿ ಹಾಗೂ ಜಡ ಲೋಹಗಳ ಅಂಶವನ್ನು ಪತ್ತೆ ಮಾಡುವುದಕ್ಕಾಗಿ ಪರೀಕ್ಷೆಗೊಳಪಡಿಸಲಾಯಿತು. ಎಲ್ಲ ನೀರಿನ ಮಾದರಿಗಳ ವೈಲಕ್ಷಣಗಳು ಭಾರತೀಯ ಮಾನಕ ಸಂಸ್ಥೆಯ ಮಾನಕ 10500 ನಿರ್ಧರಿಸಿದ ಮಾನಕಗಳ ಮಿತಿಯೊಳಗಿರುತ್ತವೆ (ಸೂಕ್ಷ್ಮ ಜೀವಿಗಳು ನದಿಯ ನೀರಿನ ಮಾದರಿಯಲ್ಲಿ ಕಂಡುಬಂದಿವೆ).

**(ಇ) ಮಣ್ಣಿನ ಪರಿಸರ :**

ಅಧ್ಯಯನ ಪ್ರದೇಶದಲ್ಲಿರುವ ಮಣ್ಣಿನ ಗುಣಮಟ್ಟವನ್ನು ನಿಶ್ಚಯಿಸಲು ಆರು ಮಾದರಿಗಳನ್ನು ಸಂಗ್ರಹಿಸಲಾಯಿತು. ಅಧ್ಯಯನ ಪ್ರದೇಶಲ್ಲಿರುವ ಮಣ್ಣು ಕಪ್ಪು ಬಣ್ಣದ್ದಾಗಿದ್ದು ಮಧ್ಯಮ ಫಲವತ್ತತೆಯನ್ನು ಹೊಂದಿದೆ.

**(ಈ) ಸಸ್ಯರಾಶಿ ಹಾಗೂ ಪ್ರಾಣಿ ಜಗತ್ತು :**

ಅಧ್ಯಯನ ಪ್ರದೇಶದಲ್ಲಿರುವಂತಹ ವಿವಿಧ ಸಸ್ಯ ಹಾಗೂ ಪ್ರಾಣಿ ಜೀವಿಗಳನ್ನು ಗುರುತಿಸಲಾಯಿತು. ಇದರಿಂದ ಕಂಡುಬಂದ ಅಂಶವೇನೆಂದರೆ ಅಧ್ಯಯನ ಪ್ರದೇಶದಲ್ಲಿ ನಶಿಸಿ ಹೋಗುವಂತಹ ಯಾವುದೇ ಸಸ್ಯ ಪ್ರಭೇದ ಇರುವುದಿಲ್ಲ ಹಾಗೂ ಯಾವುದೇ

ತರಹದ ಅರಣ್ಯ, ಜೈವಿಕ ವಲಯ, ಕಾಂಡ್ಲವನ, ಅಭಯಾರಣ್ಯ, ರಾಷ್ಟ್ರೀಯ ಉದ್ಯಾನವನಗಳಿರುವುದಿಲ್ಲ.

**(ಉ) ಸಾಮಾಜಿಕ ಹಾಗೂ ಆರ್ಥಿಕ ಪರಿಸರ:**

ಅಧ್ಯಯನ ಪ್ರದೇಶದ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಯನ್ನು ಮಧ್ಯಮವೆಂದು ವರ್ಗೀಕರಿಸಬಹುದಾಗಿದೆ.

## 3.0. ಉದ್ದೇಶಿತ ಘಟಕದ ಪರಿಣಾಮಗಳು ಹಾಗೂ ಪರಿಸರ ಕಾರ್ಯನಿರ್ವಹಣಾ ವ್ಯವಸ್ಥೆ

### 3.1 ನಿರ್ಮಾಣದ ಹಂತ :

ನಿರ್ಮಾಣದ ಹಂತದಲ್ಲಿ ಉಂಟಾಗುವ ಪರಿಣಾಮಗಳು ಸಾಮಾನ್ಯವಾಗಿ ಸ್ಥಳೀಯ ಮತ್ತು ತಾತ್ಕಾಲಿಕವಾಗಿದ್ದು ಇವುಗಳು ನಿರ್ಮಾಣದ ನಂತರ ಕಂಡು ಬರುವುದಿಲ್ಲ. ಕಟ್ಟಡಗಳನ್ನು ನಿರ್ಮಾಣ ಮಾಡುವಾಗ ವಾಹನಗಳ ಚಲನೆಯಿಂದ ಮತ್ತು ಇತರ ಚಟುವಟಿಕೆಗಳಿಂದ ಧೂಳು ಏಳುವ ಸಂಭವವಿದೆ. ರಸ್ತೆಗಳ ಮೇಲೆ ನಿಯಮಿತವಾಗಿ ನೀರು ಸಿಂಪಡಿಸಿ ಏಳುವ ಧೂಳನ್ನು ತಡೆಗಟ್ಟಲಾಗುವುದು. ಇದಲ್ಲದೇ ವಾಹನಗಳನ್ನು ಕಾಲಕಾಲಕ್ಕೆ ಸರಿಯಾಗಿ ನಿರ್ವಹಿಸಿ ಅವುಗಳಿಂದ ಬರುವ ಹೊಗೆಯನ್ನು ವಾಯು ಮಾಲಿನ್ಯದ ಮಿತಿಯಲ್ಲಿ ಇಡಲಾಗುವುದು. ನಿರ್ಮಾಣದ ಹಂತದಲ್ಲಿ ಕಾರ್ಮಿಕರಿಗೆ ಬೇಕಾಗುವ ಎಲ್ಲ ಮೂಲಭೂತ ಸೌಕರ್ಯಗಳನ್ನು ಕಾರ್ಖಾನೆಯು ಒದಗಿಸಲಿದೆ. ನಿರ್ಮಾಣದ ಹಂತದಲ್ಲಿ ಸ್ಥಳೀಯ ಕಾರ್ಮಿಕರಿಗೆ ಉದ್ಯೋಗಾವಕಾಶದ ಲಾಭ ದೊರೆಯುತ್ತದೆ.

### 3.2 ಕಾರ್ಯಾಚರಣೆಯ ಹಂತ :

#### 3.2.1 ವಾಯು ಪರಿಸರ :

ವಾಯು ಮಾಲಿನ್ಯದ ಮುಖ್ಯ ಮೂಲಗಳು ಎರಡು 100 ಟನ್ ಪ್ರತಿ ಘಂಟೆ ಮತ್ತು ಎರಡು 20 ಟನ್ ಪ್ರತಿಘಂಟೆಯ ಹಬೆಯಂತ್ರಗಳಾಗಿವೆ. ಹಬೆ ಯಂತ್ರಗಳಿಗೆ ಅಧಿಕ ಕಾರ್ಯ ಸಮರ್ಥತೆಯ ವಾಯು ಮಾಲಿನ್ಯ ನಿಯಂತ್ರಣ ಉಪಕರಣಗಳನ್ನು ಅಳವಡಿಸಲಾಗುವುದು.

ಉದ್ದೇಶಿತ ವಾಯು ಮಾಲಿನ್ಯ ಮೂಲಗಳಿಂದ ಹೊರಬೀಳುವ ಘನ ಪಧಾರ್ಥಗಳು (PM 10), ಗಂಧಕದ ಡೈ ಆಕ್ಸೈಡ್ (SOx) ಹಾಗೂ ಸಾರಜನಕದ ಅಕ್ಸೈಡ್‌ಗಳ (NOx) ಭೂಮಟ್ಟದ ಸಾಂದ್ರತೆಯನ್ನು (Ground level concentration) ಊಹೆ ಮಾಡಲು

ಗಣಕೀಕೃತ ಮಾಡೆಲ್‌ಗಳನ್ನು ಉಪಯೋಗಿಸಲಾಯಿತು. ಸರ್ವೇಕ್ಷಣೆ ಸಮಯದಲ್ಲಿ ಅಳತೆ ಮಾಡಿದ ಗಣಕೀಕೃತ ಮಾಡೆಲ್‌ನಿಂದ ಊಹಿಸಲಾದ ಫಲಿತಾಂಶಗಳು ಈ ಕೆಳಗಿನಂತಿವೆ.

| ಅ. ಸಂ | ವಿವರಗಳು | ತೇಲಾಡುವ ಘನ ಪದಾರ್ಥಗಳು (PM 10) ಮೈಕ್ರೋಗ್ರಾಂ ಪ್ರತಿ ಘ.ಮೀ | ಗಂಧಕದ ಡೈ ಆಕ್ಸೈಡ್ (SOx) ಮೈಕ್ರೋಗ್ರಾಂ ಪ್ರತಿ ಘ.ಮೀ. | ಸಾರಜನಕದ ಆಕ್ಸೈಡ್ (NOx) ಮೈಕ್ರೋಗ್ರಾಂ ಪ್ರತಿ ಘ.ಮೀ. |
|---|---|---|---|---|
| 1 | ತಳಹದಿಯ ಭೂ ಮಟ್ಟದ ಸಾಂದ್ರತೆ (ಗರಿಷ್ಠ) | 51.50 | 15.80 | 16.70 |
| 2 | ಉದ್ದೇಶಿತ ಕೈಗಾರಿಕೆಯಿಂದ ಭೂಮಟ್ಟದ ಸಾಂದ್ರತೆಯಲ್ಲಿ ಹೆಚ್ಚುವ ಪ್ರಮಾಣ | 1.75 | 21.72 | 5.19 |
| 3 | ಒಟ್ಟು ಭೂ ಮಟ್ಟದ ಸಾಂದ್ರತೆ | 53.25 | 37.52 | 21.89 |
| 4 | ಮಾಲಿನ್ಯ ನಿಯಂತ್ರಣ ಮಂಡಳಿ ನಿರ್ಧರಿಸಿದ ಮಾನಕ (ವಾಸಸ್ಥಾನ ಮತ್ತು ಹಳ್ಳಿಗಾಡಿನ ಹವಾಗುಣ ಮಟ್ಟಕ್ಕಾಗಿ) | 100.00 | 80.00 | 80.00 |

ಮೇಲ್ಕಾಣಿಸಿದ ಅಂಶಗಳಿಂದ ಕಂಡುಬರುವುದೇನೆಂದರೆ ಉದ್ದೇಶಿತ ಕೈಗಾರಿಕೆಯ ವಾಯು ಮಾಲಿನ್ಯ ಮೂಲಗಳಿಗೆ ಅತ್ಯಾಧುನಿಕ ನಿಯಂತ್ರಣ ವ್ಯವಸ್ಥೆಗಳನ್ನು ಹಾಗೂ ನಿರ್ಧಿಷ್ಠ ಹೊಗೆ ಕೊಳವೆಗಳನ್ನು ಅಳವಡಿಸುವುದರಿಂದ ವಾಯು ಮಾಲಿನ್ಯವನ್ನು ನಿಗದಿಪಡಿಸಿದ ಮಾನಕಗಳೊಳಗೆ ನಿಯಂತ್ರಿಸಬಹುದಾಗಿದೆ. ಇದರಿಂದ ಯಾವುದೇ ಪ್ರತಿಕೂಲ ಪರಿಣಾಮವು ಹವಾಗುಣಮಟ್ಟದ ಮೇಲೆ ಆಗಲಾರದೆಂದು ಧೃಡಪಡುತ್ತದೆ.

**ವಾಯು ಮಾಲಿನ್ಯ ನಿಯಂತ್ರಣ ಉಪಕರಣಗಳು:**

ಎರಡು 100 ಟನ್ ಪ್ರತಿ ಘಂಟೆ ಹಬೆಯಂತ್ರಗಳಿಗೆ ಅತ್ಯಾಧುನಿಕ ಮಾಲಿನ್ಯ ನಿಯಂತ್ರಣ ವ್ಯವಸ್ಥೆ (ಎಲೆಕ್ಟ್ರೋ ಸ್ಟ್ಯಾಟಿಕ್ ಪ್ರಿಸಿಪಿಟೇಟರ್) (Electro Static Precipitator) ಮತ್ತು ಎರಡು 85 ಮೀಟರ್ ಎತ್ತರದ ಹೊಗೆ ಕೊಳವೆಗಳು.

ಎರಡು 20 ಟನ್ ಪ್ರತಿ ಘಂಟೆ ಹಬೆಯಂತ್ರಗಳಿಗೆ ಅತ್ಯಾಧುನಿಕ ಮಾಲಿನ್ಯ ನಿಯಂತ್ರಣ ವ್ಯವಸ್ಥೆ (ಗೋಪುಚ್ಚಾಕಾರದ ಬಹು ಶಂಕುಗಳ ಉಪಕರಣ ಮತ್ತು ವೆಟ್ ಸ್ಕ್ರಬ್ಬರ್) (Cyclone Seperator and Wet Scrubber) ಮತ್ತು ಎರಡು 50 ಮೀಟರ್ ಎತ್ತರದ ಹೊಗೆ ಕೊಳವೆಗಳು. ಮೇಲೆ ಹೇಳಿದಂತ ಎಲ್ಲ ಹೊಗೆ ಕೊಳವೆಗಳನ್ನು ಕೇಂದ್ರಿಯ ಮಾಲಿನ್ಯ ನಿಯಂತ್ರಣ ಮಂಡಳಿಯ ನಿಯಮಗಳಿಗನುಗುಣವಾಗಿ ಪ್ರತಿಷ್ಠಾಪಿಸಲಾಗುವುದು.

ಕಲ್ಲಿದ್ದಲು ಪುಡಿ ಮಾಡುವ ಯಂತ್ರಗಳಿಗಳಿಂದ ಬರುವ ಧೂಳನ್ನು ತಡೆಗಟ್ಟಲು ಸೋಸು ಚೀಲಗಳನ್ನೊಳಗೊಂಡ (Bag Filters) ನಿಯಂತ್ರಣ ಉಪಕರಣಗಳನ್ನು ಅಳವಡಿಸಲಾಗುವುದು.

### 3.2.2. ವಾಸನೆ ನಿಯಂತ್ರಣ:

ಹಾಲಿ ಮದ್ಯಸಾರ ಘಟಕಗಳು, ಘಟಕದಿಂದ ಬರುವಂತಹ ತ್ಯಾಜ್ಯ ನೀರನ್ನು ಸಂಸ್ಕರಿಸಿ, ಸಕ್ಕರೆ ಘಟಕದಿಂದ ಬರುವಂತಹ ಒತ್ತುವ ಯಂತ್ರದ ಮಣ್ಣು ಮತ್ತು ಬೂದಿಯನ್ನು ಮಿಶ್ರಣಗೊಳಿಸಿ ಸಾವಯುವ ಗೊಬ್ಬರವನ್ನು ತಯಾರಿಸುತ್ತಿವೆ. ಇಂತಹ ಮದ್ಯಸಾರ ಘಟಕಗಳಲ್ಲಿ ವಾಸನೆಯ ಪ್ರಭಾವವಿರುವುದು ಕಂಡುಬಂದಿದೆ. ಆದರೆ ಉದ್ದೇಶಿತ ಮದ್ಯಸಾರ ಘಟಕವು ಸಾವಯುವ ಮಿಶ್ರಗೊಬ್ಬರದ ಯೋಜನೆಯನ್ನು ಅಳವಡಿಸಿಕೊಳ್ಳುತ್ತಿಲ್ಲ. ಇದರ ಬದಲಾಗಿ, ಕಲ್ಲಿದ್ದಲು ಹಾಗೂ ಮದ್ಯಸಾರ ಘಟಕದಿಂದ ಬರುವಂತ ತ್ಯಾಜ್ಯ ನೀರನ್ನು (ತ್ಯಾಜ್ಯ ನೀರಲ್ಲಿರುವ ನೀರಿನ ಪ್ರಮಾಣವನ್ನು ಕಡಿಮೆಗೊಳಿಸಲು ಅದನ್ನು ಕುದಿಸಲಾಗುವುದು) ಎರಡು 20 ಟನ್ ಹಬೆಯಂತ್ರಗಳಿಗೆ ಇಂಧನವನ್ನಾಗಿ ಬಳಸಲಾಗುವುದು. ಹಬೆಯಂತ್ರದಲ್ಲಿ ತ್ಯಾಜ್ಯ ನೀರು ಉರಿದು ಹೋಗುವುದರಿಂದ ವಾಸನೆಯ ಪ್ರಭಾವವನ್ನು ತಡೆಗಟ್ಟಬಹುದಾಗಿದೆ.

### 3.2.3. ಶಬ್ದ ಪರಿಸರ :

ಹಾಲಿ ಕೈಗಾರಿಕೆಯಲ್ಲಿ ಡಿಸೇಲ್ ಜನರೇಟರ್‌ಗಳು ಮತ್ತು ಸಹ ವಿದ್ಯುತ್ ಘಟಕದ ಯಂತ್ರಗಳು ಶಬ್ದ ಮಾಲಿನ್ಯದ ಪ್ರಮುಖ ಮೂಲಗಳಾಗಿವೆ. ಶಬ್ದ ಮಾಲಿನ್ಯದ ಮೂಲಗಳಿಗೆ ನಿಯಂತ್ರಣ ಕ್ರಮಗಳಾಗಿ ಕವಚಗಳನ್ನು ಈಗಾಗಲೇ ಅಳವಡಿಸಲಾಗಿದೆ. ಉದ್ದೇಶಿತ ಯೋಜನೆಯಲ್ಲೂ ಸಹ, ಸಹವಿದ್ಯುತ್ ಘಟಕಗಳ ಯಂತ್ರಗಳಿಗೆ ಶಬ್ದ

ಮಾಲಿನ್ಯ ನಿಯಂತ್ರಣ ಕ್ರಮಗಳಾಗಿ ಕವಚಗಳನ್ನು ಅಳವಡಿಸಲಾಗುವುದು. ಕಾರ್ಖಾನೆಯ ಸುತ್ತ ಯಥೇಚ್ಚವಾಗಿ ಹಸಿರು ಪಟ್ಟಿಯನ್ನು ಬೆಳೆಸಲಾಗುವುದು. ಇದರಿಂದ ಸ್ಥಾವರದ ಎಲ್ಲೆಯೊಳಗಿನ ಶಬ್ದ ಪಾತಳಿಯ ಮಟ್ಟವನ್ನು 75 ಡೆಸಿ ಬೆಲ್ಸ್‌ನೊಳಗೆ ಇಡಬಹುದಾಗಿದೆ.

### 3.2.4. ಜಲ ಪರಿಸರ :

ನಿಯೋಜಿತ ಕೈಗಾರಿಕೆ ನೀರನ್ನು ವಿವಿಧ ಉದ್ದೇಶಗಳಿಗಾಗಿ ಬಳಸಲಿದೆ. ಬಳಕೆಯ ವಿವರಗಳು ಈ ಕೆಳಗಿಂತಿವೆ.

### 3.2.4.1 ನೀರಿನ ಬಳಕೆಯ ವಿವರಗಳು (ಘ.ಮೀ. ಪ್ರತಿದಿನ)

| ನೀರಿನ ಪ್ರಮಾಣ ಘನ ಮೀಟರಗಳಲ್ಲಿ ಪ್ರತಿದಿನ | 270 ದಿನಗಳಿಗಾಗಿ ಸಕ್ಕರೆ, ಸಹ ವಿದ್ಯುತ್ ಮತ್ತು ಮದ್ಯಸಾರ ಘಟಕಗಳು ಕಾರ್ಯನಿರ್ವಹಿಸುತ್ತಿರುವಾಗ | 30 ದಿನಗಳಿಗಾಗಿ ಸಹ ವಿದ್ಯುತ್ ಮತ್ತು ಮದ್ಯಸಾರ ಘಟಕಗಳು ಕಾರ್ಯನಿರ್ವಹಿಸುತ್ತಿರುವಾಗ | 30 ದಿನಗಳಿಗಾಗಿ ಮದ್ಯಸಾರ ಘಟಕ ಕಾರ್ಯನಿರ್ವಹಿಸುತ್ತಿರುವಾಗ | ಬಾಕಿ 35 ದಿನಗಳಿಗಾಗಿ ಯಾವುದೇ ಘಟಕ ಕಾರ್ಯ ನಿರ್ವಹನೆಯಲ್ಲಿ ಇಲ್ಲದಿರುವಾಗ |
|---|---|---|---|---|
| ಬೇಕಾಗುವ ಒಟ್ಟು ನೀರು | 14621 | 5396 | 2645 | 20 |
| ಮರುಬಳಕೆ | (–) 11216 | (–) 716 | (–) 716 | – |
| ಬೇಕಾಗುವ ಒಟ್ಟು ಶುಧ್ಧ ನೀರು | 3405 | 4680 | 1929 | 20 |
| ಶುಧ್ಧ ನೀರಿನ ಮೂಲಗಳು | ಘಟಪ್ರಭಾ ನದಿ | | | |

### 3.2.4 ಜಲ ಮಾಲಿನ್ಯ:

ಎಲ್ಲ ಘಟಕಗಳು ಕಾರ್ಯನಿರ್ವಹಿಸುತ್ತಿರುವಾಗ ಬರುವಂತಹ ತ್ಯಾಜ್ಯ ನೀರಿನ ಪ್ರಮಾಣ ಪ್ರತಿದಿನ 3805 ಘನ ಮೀಟರಗಳಷ್ಟಾಗಿದೆ. ಕೆಳಗಿನ ಕೋಷ್ಠಕವು ಬೇರೆ ಬೇರೆ ಘಟಕಗಳಿಂದ ಉತ್ಪತ್ತಿಯಾಗುವ ರೊಚ್ಚು ನೀರಿನ ಪ್ರಮಾಣ ಅಳವಡಿಸಲಾಗಿರುವ ಅಥವಾ ಉದ್ದೇಶಿತ ಸಂಸ್ಕರಣಾ ಘಟಕಗಳ ವಿವರಣೆ ಹಾಗೂ ಅಂತಿಮವಾಗಿ ವಿಲೇ ಮಾಡುವ ವಿಧಾನಗಳನ್ನು ವಿಶ್ಲೇಷಿಸುತ್ತದೆ.

**ರೊಚ್ಚು ನೀರಿನ ಸಂಸ್ಕರಣೆ ಮತ್ತು ವಿಸರ್ಜನೆಯ ವಿವರಗಳು (ಘ.ಮೀ. ಪ್ರತಿದಿನ)**

| ಅ.ಸಂ | ರೊಚ್ಚು ನೀರಿನ ಮೂಲ | ವಿಸರ್ಜನೆ | ಸಂಸ್ಕರಣಾ ಘಟಕ | ಅಂತಿಮವಾಗಿ ವಿಲೇ ಮಾಡುವ ವಿಧಾನ |
|---|---|---|---|---|
| ಅ | ಸಕ್ಕರೆ ಘಟಕ | | | |
| 1 | ಸಂಸ್ಕರಣೆ | 1500 | ಎರಡು ಹಂತದ ಸೂಷ್ಮಾಣು ಜೀವಿಗಳ ಶುಧ್ಧಿಕರಣ ಘಟಕ | ಕಾರ್ಖಾನೆಯ ಆವರಣದಲ್ಲಿ ನೀರಾವರಿ/ತೋಟಗಾರಿಕೆ/ಹಸಿರು ಪಟ್ಟಿಗಾಗಿ ಮರುಬಳಕೆ |
| ಬ | ಸಹ ವಿದ್ಯುತ್ ಘಟಕ | | | |

| | | | | |
|---|---|---|---|---|
| 1 | ಗೋಪುರಾಕಾರದ ನೀರಿನ ಶೀಥಲೀಕರಣ ಯಂತ್ರಗಳು (ವಿದ್ಯುತ್ ಘಟಕ ಮತ್ತು ಸಕ್ಕರೆ ಕಾರ್ಖಾನೆ) | 567 | ತಟಸ್ಥಗೊಳಿಸುವಿಕೆ | ಕಾರ್ಖಾನೆಯ ಆವರಣದಲ್ಲಿ ನೀರಾವರಿ/ತೋಟಗಾರಿಕೆ/ಹಸಿರು ಪಟ್ಟಿಗಾಗಿ ಮರುಬಳಕೆ |
| 2 | ಹಬೆ ಯಂತ್ರದ ಸಲುವಾಗಿ (**Make up**) (ವಿದ್ಯುತ್ ಘಟಕ) | 76 | ತಟಸ್ಥಗೊಳಿಸುವಿಕೆ | ಕಾರ್ಖಾನೆಯ ಆವರಣದಲ್ಲಿ ನೀರಾವರಿ/ತೋಟಗಾರಿಕೆ/ಹಸಿರು ಪಟ್ಟಿಗಾಗಿ ಮರುಬಳಕೆ |
| 3. | ಡಿ ಎಮ್ ಪ್ಲ್ಯಾಂಟ್ ಬ್ಯಾಕ್ ವಾಷ್ | 302 | ತಟಸ್ಥಗೊಳಿಸುವಿಕೆ | ಕಾರ್ಖಾನೆಯ ಆವರಣದಲ್ಲಿ ನೀರಾವರಿ/ತೋಟಗಾರಿಕೆ/ಹಸಿರು ಪಟ್ಟಿಗಾಗಿ ಮರುಬಳಕೆ |
| ಕ | ಮದ್ಯಸಾರ ಘಟಕ | | | |
| 1 | ತ್ಯಾಜ್ಯ ನೀರು (ಸ್ಪೆಂಟ್ ವಾಶ್) | 960 | ಕುದಿಸುವಿಕೆ/ಭಾಷ್ಪೀಭವನ, ನಂತರ ಹಬೆ ಯಂತ್ರದಲ್ಲಿ ಇಂಧನವಾಗಿ ಉರಿಸುವುದು | ಅನ್ವಯವಾಗುವುದಿಲ್ಲ |
| 2 | ಸ್ಪೆಂಟ್ ಲೀಸ್ | 288 | ಶುದ್ಧೀಕರಿಸಿ 75 ಪ್ರತಿಶತ ಮರುಬಳಕೆ | 25 ಪ್ರತಿಶತ ತಟಸ್ಥಗೊಳಿಸಿ ಕಾರ್ಖಾನೆಯ ಆವರಣದಲ್ಲಿ ನೀರಾವರಿ/ತೋಟಗಾರಿಕೆ/ಹಸಿರು ಪಟ್ಟಿಗಾಗಿ ಮರುಬಳಕೆ |
| 3 | ಶೀಥಲೀಕರಣದ ಸಲುವಾಗಿ ಹಾಗೂ ಇತರೆ ತೊಳೆಯುವಿಕೆ | 80 | ತಟಸ್ಥಗೊಳಿಸುವಿಕೆ | ಕಾರ್ಖಾನೆಯ ಆವರಣದಲ್ಲಿ ನೀರಾವರಿ/ತೋಟಗಾರಿಕೆ/ಹಸಿರು ಪಟ್ಟಿಗಾಗಿ ಮರುಬಳಕೆ |
| 4 | ಹಬೆ ಯಂತ್ರದ ಸಲುವಾಗಿ (**Make up**) ಮದ್ಯಸಾರ ಘಟಕ | 16 | ತಟಸ್ಥಗೊಳಿಸುವಿಕೆ | ಕಾರ್ಖಾನೆಯ ಆವರಣದಲ್ಲಿ ನೀರಾವರಿ/ತೋಟಗಾರಿಕೆ/ಹಸಿರು ಪಟ್ಟಿಗಾಗಿ ಮರುಬಳಕೆ |
| ಡ | ಗೃಹ ಬಳಕೆ | 16 | ಸೆಪ್ಟಿಕ್ ಟ್ಯಾಂಕಗಳು | ಇಂಗು ಗುಂಡಿಗಳು |
| | ಒಟ್ಟು | 3805 | | |

ಶುದ್ಧಿಕರಿಸಿದ ತ್ಯಾಜ್ಯ ನೀರನ್ನು ನೀರಾವರಿಗಾಗಿ ಉಪಯೋಗಿಸಲು 128.27 ಹೆಕ್ಟೇರಗಳಷ್ಟು ಜಮೀನಿನ ಅಗತ್ಯವಿದೆ. ಕಾರ್ಖಾನೆಯ ಹತ್ತಿರ ಈಗಾಗಲೇ 32.39 ಹೆಕ್ಟೇರಗಳಷ್ಟು ಜಮೀನು ನೀರಾವರಿಗಾಗಿ ಲಭ್ಯವಿದೆ. ಕಾರ್ಖಾನೆಯು ಶುದ್ಧಿಕರಿಸಿದ ತ್ಯಾಜ್ಯ ನೀರನ್ನು ನೀರಾವರಿಗಾಗಿ ಉಪಯೋಗಿಸಲು ಸುತ್ತಮುತ್ತಲಿನ ರೈತರ ಜೊತೆ ಒಪ್ಪಂದಗಳನ್ನು ಮಾಡಿಕೊಂಡಿದೆ.

3.2.5. **ಭೂಪರಿಸರ ಹಾಗೂ ಘನರೂಪದ ವ್ಯರ್ಥ ವಸ್ತುಗಳು :**

ಸಕ್ಕರೆ ಹಾಗೂ ಸಹ ವಿದ್ಯುತ್ ಘಟಕಗಳಿಂದ ಬರುವ ಘನರೂಪದ ವ್ಯರ್ಥ ವಸ್ತುಗಳ ಮೂಲಗಳು ಈ ಕೆಳಗಿನಂತಿವೆ.

**(ಅ) ವಾಯು ಮಾಲಿನ್ಯ ನಿಯಂತ್ರಣ ಕಾರ್ಯಗತಿಯಲ್ಲಿ ಉತ್ಪತ್ತಿಯಾಗುವ ಘನರೂಪದ ವ್ಯರ್ಥ ವಸ್ತುಗಳ ವಿವರ :**

| ಅ. ಸಂ | ವಿವರಗಳು | ಎರಡು 100 ಟನ್ ಹಬೆ ಯಂತ್ರ 270 ದಿನಗಳ ಕಾರ್ಯನಿರ್ವಹಣೆ | | ಸಂಗ್ರಹಿಸುವ ರೀತಿ | ವಿಲೇಮಾಡುವ ವಿಧಾನ |
|---|---|---|---|---|---|
| | | ಕಬ್ಬಿನ ಸಿಪ್ಪೆ | ಕಲ್ಲಿದ್ದಲು | | |
| 1 | ಇಂಧನದ ಬಳಕೆಯ ಪ್ರಮಾಣ ಪ್ರತಿದಿನ ಮೆಟ್ರಿಕ್ ಟನ್‌ಗಳಲ್ಲಿ | 2677 | 297 | ಯಂತ್ರಗಳ ಮುಖಾಂತರ | -- |
| 2 | ಇಂಧನದಲ್ಲಿರುವ ಬೂದಿಯ ಪ್ರಮಾಣ ಪ್ರತಿಶತ | 0.93 ಪ್ರತಿಶತ | 40 ಪ್ರತಿಶತ (ಗರಿಷ್ಠ) | ಯಂತ್ರಗಳ ಮುಖಾಂತರ | ರೈತರಿಗೆ ಗೊಬ್ಬರದ ರೂಪದಲ್ಲಿ ಹಂಚಿಕೆ |
| | ಒಟ್ಟು ಶೇಖರಣೆಯಾಗುವ ಬೂದಿ ಪ್ರತಿದಿನ ಮೆಟ್ರಿಕ್ ಟನ್‌ಗಳಲ್ಲಿ | 24.8 | 118.8 | ಯಂತ್ರಗಳ ಮುಖಾಂತರ | ರೈತರಿಗೆ ಗೊಬ್ಬರದ ರೂಪದಲ್ಲಿ ಹಂಚಿಕೆ |

**(ಬ) ತಯಾರಿಕಾ ಕಾರ್ಯಗತಿ ವಿಧಾನದಲ್ಲಿ ಉತ್ಪತ್ತಿಯಾಗುವ ಉಪ ಉತ್ಪನ್ನಗಳು/ ಘನರೂಪದ ವ್ಯರ್ಥ ವಸ್ತುಗಳ ವಿವರ :**

| ಅ. ಸಂ | ವಿವರ | ಪ್ರಮಾಣ ಮೆ ಟನ್ ಪ್ರತಿದಿನ | | ಸಂಗ್ರಹಿಸುವ ರೀತಿ | ವಿಲೇಮಾಡುವ ವಿಧಾನ |
|---|---|---|---|---|---|
| | | ಹಾಲಿ | ಉದ್ದೇಶಿತ | | |
| 1 | ಕಬ್ಬಿನ ಸಿಪ್ಪೆ (Bagasse) | 3200 | 4800 | ಯಂತ್ರಗಳ ಮುಖಾಂತರ | ಹಬೆ ಯಂತ್ರಗಳಿಗೆ ಇಂಧನವಾಗಿ |
| 2 | ಕಾಕಂಬಿ | 400 | 600 | ಕೊಳವೆಗಳ ಮುಖಾಂತರ | ಮದ್ಯಸಾರ ಘಟಕಕ್ಕೆ ಕಚ್ಚಾವಸ್ತು |
| 3 | ಒತ್ತುವ ಯಂತ್ರಗಳಿಂದ ಬರುವ ಮಣ್ಣು (Press mud) | 400 | 600 | ಯಂತ್ರಗಳ ಮುಖಾಂತರ | ರೈತರಿಗೆ ಗೊಬ್ಬರದ ರೂಪದಲ್ಲಿ ಹಂಚಿಕೆ |
| 4 | ಸಕ್ಕರೆ ಘಟಕದ ತ್ಯಾಜ್ಯ ನೀರಿನ ಸಂಸ್ಕರಣಾ ಘಟಕದಿಂದ ಬರುವ ಕೆಸರು | 0.6 | 3.0 | ಮಾನವ ಸಂಪನ್ಮೂಲ | ಹಸಿರು ಪಟ್ಟಿಗಾಗಿ ಗೊಬ್ಬರ |

## 2.5.2. ಭೂಪರಿಸರ ಹಾಗೂ ಘನರೂಪದ ವ್ಯರ್ಥ ವಸ್ತುಗಳು :

ಮದ್ಯಸಾರ ಘಟಕದಿಂದ ಬರುವ ಘನರೂಪದ ವ್ಯರ್ಥ ವಸ್ತುಗಳ ಮೂಲಗಳು ಈ ಕೆಳಗಿನಂತಿವೆ.

**(ಅ) ವಾಯುಮಾಲಿನ್ಯ ನಿಯಂತ್ರಣ ಕಾರ್ಯಗತಿಯಲ್ಲಿ ಮದ್ಯಸಾರ ಘಟಕದಿಂದ ಉತ್ಪತ್ತಿಯಾಗುವ ಘನರೂಪದ ವ್ಯರ್ಥ ವಸ್ತುಗಳ ವಿವರ :**

| ಅ. ಸಂ | ವಿವರಗಳು | ಎರಡು 20 ಟನ್ ಹಬೆ ಯಂತ್ರ 300 ದಿನಗಳ ಕಾರ್ಯನಿರ್ವಹಣೆ | | ಸಂಗ್ರಹಿಸುವ ರೀತಿ | ವಿಲೇಮಾಡುವ ವಿಧಾನ |
|---|---|---|---|---|---|
| | | ಬಾಷ್ಪೀಕರಿಸಿದ ತ್ಯಾಜ್ಯ ನೀರು | ಕಲ್ಲಿದ್ದಲು | | |
| 1 | ಇಂಧನದ ಬಳಕೆಯ ಪ್ರಮಾಣ ಪ್ರತಿದಿನ ಮೆಟ್ರಿಕ್ ಟನ್‌ಗಳಲ್ಲಿ | 336 | 106 | ಯಂತ್ರಗಳ ಮುಖಾಂತರ | -- |
| 2 | ಇಂಧನದಲ್ಲಿರುವ ಬೂದಿಯ ಪ್ರಮಾಣ ಪ್ರತಿಶತ | 1% ಪ್ರತಿಶತ | 40 ಪ್ರತಿಶತ (ಗರಿಷ್ಠ) | ಯಂತ್ರಗಳ ಮುಖಾಂತರ | ರೈತರಿಗೆ ಗೊಬ್ಬರದ ರೂಪದಲ್ಲಿ ಹಂಚಿಕೆ |
| | ಒಟ್ಟು ಶೇಖರಣೆಯಾಗುವ ಬೂದಿ ಪ್ರತಿದಿನ ಮೆಟ್ರಿಕ್ ಟನ್‌ಗಳಲ್ಲಿ | 3.36 | 42.4 | ಯಂತ್ರಗಳ ಮುಖಾಂತರ | ರೈತರಿಗೆ ಗೊಬ್ಬರದ ರೂಪದಲ್ಲಿ ಹಂಚಿಕೆ |

**(ಬ) ತಯಾರಿಕಾ ಕಾರ್ಯಗತಿ ವಿಧಾನದಲ್ಲಿ ಮದ್ಯಸಾರ ಘಟಕದಿಂದ ಉತ್ಪತ್ತಿಯಾಗುವ ಘನರೂಪದ ವ್ಯರ್ಥ ವಸ್ತುವಿನ ವಿವರ:**

| ಅ. ಸಂ | ವಿವರ | ಪ್ರಮಾಣ ಮೆ ಟನ್ ಪ್ರತಿದಿನ | ಸಂಗ್ರಹಿಸುವ ರೀತಿ | ವಿಲೇಮಾಡುವ ವಿಧಾನ |
|---|---|---|---|---|
| 1 | ಹುಳಿಯುವಿಕೆಯಿಂದ ಬರುವಂತಹ ಯೀಸ್ಟ ಕೆಸರು | 12 | ಯಂತ್ರಗಳ ಮುಖಾಂತರ | ಪಶುಖಾದ್ಯ ರೂಪದಲ್ಲಿ ಮಾರಾಟ |

**4.0. ಹಸಿರು ಪಟ್ಟಿ ಪ್ರದೇಶದ ಅಭಿವೃದ್ಧಿ :**

ಕಾರ್ಖಾನೆಯು ಸುಮಾರು 20.22 ಹೆಕ್ಟೇರ ಪ್ರದೇಶದಲ್ಲಿ ವಿವಿಧ ಜಾತಿಯ ಸಸ್ಯಗಳನ್ನು ಕಾರ್ಖಾನೆಯ ಆವರಣದಲ್ಲಿ ಬೆಳೆಸಿದೆ.

**5.0 ಮಳೆ ನೀರಿನ ಕುಯಿಲು :**

ಮಾಳಿಗೆಗಳಿಂದ ಬರುವಂತಹ ನೀರು, ಹರಿದು ಪೋಲಾಗುವ ನೀರನ್ನು ಸರಿಯಾದ ಚರಂಡಿ ವ್ಯವಸ್ಥೆಗಳ ಮೂಲಕ ಸಂಗ್ರಹಿಸಿ, ಗುಂಡಿಗಳ ಮೂಲಕ ಅಂತರ್ಜಲದ ಮರು ಪೂರಣಕ್ಕಾಗಿ ಬಳಸಲಾಗುವುದು.

**6.0. ಸಾಮಾಜಿಕ ಪರಿಸರ :**

ಸತೀಶ ಸಕ್ಕರೆ ಕಾರ್ಖಾನೆಯಲ್ಲಿ ಈಗಾಗಲೇ 1350 ಪರಿಣಿತ ಮತ್ತು ಅಪರಿಣಿತ ಉದ್ಯೋಗಿಗಳಿದ್ದಾರೆ. ಉದ್ದೇಶಿತ ಘಟಕಗಳ ನಿರ್ಮಾಣದ ಹಂತದಲ್ಲಿ 1000 ಹಾಗೂ ಕಾರ್ಯಾಚರಣೆ ಹಂತದಲ್ಲಿ 235 ಸ್ಥಳೀಯ ಅಪರಿಣಿತ ಮತ್ತು ಪರಿಣಿತ ಕೆಲಸಗಾರರಿಗೆ ಉದ್ಯೋಗಗಳು ಸೃಷ್ಠಿಯಾಗಲಿವೆ.

ಇದಲ್ಲದೇ ಕಾರ್ಖಾನೆಯು ಕೆಳಕಂಡ ಮೂಲಭೂತ ಸೌಲಭ್ಯಗಳನ್ನು ಈಗಾಗಲೇ ಒದಗಿಸಿದೆ.

* ರುಗ್ಣ ವಾಹನ
* ಕುಡಿಯುವ ನೀರಿನ ಸರಬರಾಜಿನ ವ್ಯವಸ್ಥೆ.
* ಉದ್ಯೋಗಿಗಳಿಗಾಗಿ ಸಾರಿಗೆ ವ್ಯವಸ್ಥೆ.
* ವಸತಿ ಗೃಹ ಸಂಕೀರ್ಣ
* ಮಕ್ಕಳಿಗಾಗಿ ಉದ್ಯಾನವನ.
* ರಸ್ತೆಗಳು
* ಉದ್ಯೋಗಿಗಳಿಗಾಗಿ ಸುರಕ್ಷಿತ ಉಪಕರಣಗಳು, ಪಾದರಕ್ಷೆಗಳು, ಶಿರಸ್ತ್ರಾಣಗಳು, ಕೈಗವಚಗಳು, ಸಮವಸ್ತ್ರಗಳು, ಕನ್ನಡಕಗಳು.

**7.0.** ಸಮುದಾಯ ಅಭಿವೃದ್ಧಿಯ ಕಾರ್ಯಸೂಚಿ:

ಸತೀಶ ಸಕ್ಕರೆ ಕಾರ್ಖಾನೆಯು ಸುತ್ತಮುತ್ತಲಿನ ಸಾಮಾಜಿಕ ಸಂಸ್ಥೆಗಳಿಗೆ ಸಾಮೂಹಿಕ ವಿವಾಹಗಳನ್ನು ನೆರವೇರಿಸಲು ಹಣಕಾಸಿನ ರೂಪದಲ್ಲಿ ದೇಣಿಗೆಯನ್ನು ನೀಡುತ್ತಿದೆ. ಇದಲ್ಲದೇ ಸುತ್ತಮುತ್ತಲಿನ ವಿದ್ಯಾ ಸಂಸ್ಥೆಗಳು, ಶಾಲೆಗಳು ಹಾಗೂ ದೇವಸ್ಥಾನಗಳಿಗೆ ದೇಣಿಗೆಯನ್ನು ನೀಡುತ್ತಿದೆ. ಕೆಳಗಿನ ಕೋಷ್ಟಕವು ಸಮುದಾಯ ಅಭಿವೃದ್ಧಿಯ ಕಾರ್ಯಸೂಚಿಯ ವಿವರಗಳನ್ನು ಒಳಗೊಂಡಿದೆ.

| ವಿವರಗಳು | ಅಂದಾಜಿಸಿದ ವೆಚ್ಚ ಲಕ್ಷ ರೂಪಾಯಿಗಳಲ್ಲಿ ಪ್ರತಿ ವರ್ಷಕ್ಕೆ |
|---|---|
| ಬಡ ವಿದ್ಯಾರ್ಥಿಗಳಿಗಾಗಿ ಶೈಕ್ಷಣಿಕ ಅನುದಾನ | 2.0 |
| ಸುತ್ತಮುತ್ತಲಿನ ಹಳ್ಳಿಗಳ ಜನರಿಗಾಗಿ ಆರೋಗ್ಯ ಶಿಬಿರಗಳ ಆಯೋಜನೆ | 2.0 |
| ಸುತ್ತಮುತ್ತಲಿನ ಹಳ್ಳಿಗಳ ಸಾಕು ಪ್ರಾಣಿಗಳಿಗಾಗಿ ಆರೋಗ್ಯ ಶಿಬಿರಗಳ ಆಯೋಜನೆ | 2.0 |
| ರೋಗಿಗಳಿಗಾಗಿ ರುಗ್ಣ ವಾಹನ | 2.0 |
| ಪಂದ್ಯಾಟಗಳು ಹಾಗು ಸಾಂಸ್ಕೃತಿಕ ಚಟುವಟಿಕೆಗಳು | 10.0 |
| ಸುತ್ತ ಮುತ್ತಲಿನ ಶಾಲೆಗಳಲ್ಲಿ ಸಸಿ ನೆಡುವ ಕಾರ್ಯಕ್ರಮಗಳು | 5.0 |
| ರೈತರಿಗಾಗಿ ಉಚಿತ ಮಣ್ಣು ಮಾದರಿಗಳ ವಿಶ್ಲೇಷಣೆ | 2.0 |
| ಸಾವಯವ ಕೃಷಿಗಾಗಿ ತರಬೇತಿ ಶಿಬಿರಗಳು | 2.0 |
| ಒಟ್ಟು | 27.0 |

**8.0. ಯೋಜನೆಯ ನಂತರದ ಕಾರ್ಯಸೂಚಿ :**

ಕಾರ್ಖಾನೆಯು ತ್ಯಾಜ್ಯ ಜಲ ನೀರಿನ ಮಾದರಿಗಳು ಮತ್ತು ಮಣ್ಣಿನ ಮಾದರಿಗಳನ್ನು ವಿಶ್ಲೇಷಿಸುವ ಸಲುವಾಗಿ ಪ್ರಯೋಗಾಲಯವನ್ನು ಸ್ಥಾಪಿಸಿದೆ. ಅಗತ್ಯವಿದ್ದಲ್ಲಿ ಪರಿಣಿತರ ಸಹಾಯವನ್ನು ಪಡೆಯಲು ಉದ್ದೇಶಿಸಲಾಗಿದೆ. ಉದ್ದೇಶಿತ ಘಟಕಗಳ ಕಾರ್ಯಾಚರಣೆ ಹಂತದಲ್ಲಿ ಪರಿಸರದ ಗುಣವಾಚಕಗಳ ಸರ್ವೇಕ್ಷಣೆಯನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ಅರಣ್ಯ ಮತ್ತು ಪರಿಸರ ಮಂತ್ರಾಲಯದ ನಿಯಮಗಳ ಅನುಸಾರ ನಿಯಮಿತತನದಿಂದ ಮಾಡಲಿದೆ.

## 9.0 ಪರಿಸರ ಕಾರ್ಯನಿರ್ವಹಣಾ ವ್ಯವಸ್ಥೆಯ ಆಯವ್ಯಯ :

ಸತೀಶ ಸಕ್ಕರೆ ಕಾರ್ಖಾನೆಯು ಈಗಾಗಲೇ ಪರಿಸರ ಕಾರ್ಯನಿರ್ವಹಣಾ ವ್ಯವಸ್ಥೆಗಾಗಿ 9.0 ಕೋಟಿ ರೂಪಾಯಿಗಳನ್ನು ಖರ್ಚುಮಾಡಿದೆ. ಉದ್ದೇಶಿತ ಮದ್ಯಸಾರ ಘಟಕ, ಸಹ ವಿದ್ಯುತ್ ಘಟಕದ ಸಾಮರ್ಥ್ಯ ಮತ್ತು ಕಬ್ಬು ನುರಿಸುವ ಸಾಮರ್ಥ್ಯವನ್ನು ಹೆಚ್ಚಿಸುವ ಯೋಜನೆಯಲ್ಲಿ ಪರಿಸರ ಕಾರ್ಯ ನಿರ್ವಹಣಾ ವ್ಯವಸ್ಥೆಗಾಗಿ 45 ಕೋಟಿ ರೂಪಾಯಿಗಳನ್ನು ಕಾಯ್ದಿರಿಸಲಾಗಿದೆ. ಕೆಳಗಿನ ಕೋಷ್ಠಕವು ಪರಿಸರ ಕಾರ್ಯನಿರ್ವಹಣಾ ವ್ಯವಸ್ಥೆಯ ಆಯವ್ಯಯದ ವಿವರಗಳನ್ನು ಒಳಗೊಂಡಿದೆ.

| ಅ. ಸಂ | ವಿವರ | ಅನುಷ್ಠಾನಕ್ಕೆ ಆಗುವ ಅಂದಾಜು ವೆಚ್ಚ ಲಕ್ಷ ರೂ. ಗಳಲ್ಲಿ | ವಾರ್ಷಿಕ ಕಾರ್ಯಾಚರಣೆ ಮತ್ತು ನಿರ್ವಹಣೆ ವೆಚ್ಚ |
|---|---|---|---|
| 1 | (ಅ) ವಾಯು ಮಾಲಿನ್ಯ ನಿಯಂತ್ರಣ ಉಪಕರಣಗಳು | 250 | 25 |
| | (ಬ) ಹೊಗೆ ಕೊಳವೆಗಳು | 250 | 4 |
| 2 | ಬೂದಿ ನಿರ್ವಹಣೆ ಹಾಗೂ ವಿಲೇವಾರಿ | 300 | 3 |
| 3 | ತ್ಯಾಜ್ಯ ನೀರಿನ ಸಂಸ್ಕರಣ | | |
| | (ಅ) ಸಕ್ಕರೆ ಕಾರ್ಖಾನೆಯ ಶುದ್ಧೀಕರಣ ಘಟಕ | 200 | 2 |
| | (ಬ) ಮದ್ಯಸಾರ ಘಟಕದಿಂದ ಬರುವ ತ್ಯಾಜ್ಯ ನೀರನ್ನು ಬಾಷ್ಪೀಕರೀಸುವ ಉಪಕರಣ | 100 | 5 |
| | (ಕ) ಮದ್ಯಸಾರ ಘಟಕದಿಂದ ಬರುವ ತ್ಯಾಜ್ಯ ನೀರನ್ನು ಉರಿಸಲು ಬೇಕಾಗುವ ಹಬೆಯಂತ್ರ | 2900 | 30 |
| | (ಡ) ಸ್ಪೆಂಟ್‌ಲೀಸ್ ತ್ಯಾಜ್ಯ ನೀರನ್ನು ಶುದ್ಧೀಕರಿಸುವ ಘಟಕ | 100 | 10 |
| 4 | ಅಗ್ನಿಶಾಮಕ ಮತ್ತು ಸುರಕ್ಷತಾ ಉಪಕರಣ | 100 | 5 |
| 5 | ಶುದ್ಧೀಕರಿಸಿದ ತ್ಯಾಜ್ಯ ನೀರನ್ನು ನೀರಾವರಿ /ತೋಟಗಾರಿಕೆಗಾಗಿ ಬಳಸುವ ವ್ಯವಸ್ಥೆಗಾಗಿ | 50 | 5 |
| 6 | ಹಸಿರು ಪಟ್ಟಿಯ ಅಭಿವೃದ್ಧಿ | 30 | 3 |
| 7 | ಮಳೆ ನೀರಿನ ಕೊಯಿಲು ಹಾಗೂ ಹರಿದು ಹೋಗುವ ಮಳೆ ನೀರಿನ ವ್ಯವಸ್ಥೆ | 70 | 7 |
| 8 | ಉದ್ಯೋಗಿಗಳ ಆರೋಗ್ಯ ಮತ್ತು ವೈದ್ಯಕೀಯ ಸೌಲಭ್ಯಗಳು | 100 | 10 |
| 9 | ಪ್ರಯೋಗಾಲಯ | 50 | 5 |
| | ಒಟ್ಟು | 4500 | 114 |

## 9.0 ಸಂಕ್ಷೇಪಣೆ :

ಸತೀಶ ಸಕ್ಕರೆ ಕಾರ್ಖಾನೆಯು ಸಕ್ಕರೆ ಉದ್ಯಮದಲ್ಲಿ ಪ್ರಗತಿಶೀಲ ಹಾಗೂ ಬೆಳಗಾವಿ ಜಿಲ್ಲೆಯಲ್ಲಿ ಮೂಂಚೂಣಿಯಲ್ಲಿರುವ ಕಾರ್ಖಾನೆಯಾಗಿದೆ. ಕಾರ್ಖಾನೆಯು ಪರಿಸರದ ಕಾರ್ಯನಿರ್ವಹಣಾ ಸೂಚಿಯನ್ನು ಅನುಷ್ಠಾನಗೊಳಿಸಲು ವಚನಬದ್ಧವಾಗಿದೆ. ಈ ದಿಶೆಯಲ್ಲಿ ಕೈಗಾರಿಕೆಯು ಅಂತರ ರಾಷ್ಟ್ರೀಯ ಮಾನಕ ಪ್ರಮಾಣ ಪತ್ರಗಳಾದ ಐ.ಎಸ್.ಓ - 9001 ಮತ್ತು ಐ.ಎಸ್.ಓ - 14001 ಗಳನ್ನು ಪಡೆಯಲು ಉದ್ದೇಶಿಸಿದೆ. ಕೈಗಾರಿಕೆಯು ಉದ್ದೇಶಿತ ಘಟಕಕ್ಕೆ ಅತ್ಯಾಧುನಿಕ ಹಾಗೂ ಪರಿಸರ ಸ್ನೇಹಿ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲಿದೆ. ಈ ತಂತ್ರಜ್ಞಾನವು ಮಾಲಿನ್ಯವನ್ನು ನಿಯಂತ್ರಿಸಿ, ಮಿತ ಖರ್ಚಿನಲ್ಲಿ ಹೆಚ್ಚಿನ ಉತ್ಪನ್ನಗಳನ್ನು ತಯಾರಿಸಲು ಅನುಕೂಲವಾಗಲಿದೆ. ಸಕ್ಕರೆ ಕಾರ್ಖಾನೆಯಿಂದ ಬರುವಂತಹ ಉಪ ಉತ್ಪನ್ನಗಳಾದ ಕಾಕಂಬಿ ಹಾಗೂ ಕಬ್ಬಿನ ಸಿಪ್ಪೆ ಇವುಗಳನ್ನು ಉದ್ದೇಶಿತ ಸಹ ವಿದ್ಯುತ್ ಘಟಕದ ವಿಸ್ತೀರ್ಣ ಮತ್ತು ಮದ್ಯಸಾರ ಘಟಕಗಳಲ್ಲಿ ಉಪಯೋಗಿಸಲಾಗುವುದು. ಇದರಿಂದ ಕಚ್ಚಾ ವಸ್ತುಗಳ ಸಾಗಾಣಿಕೆಯ ಖರ್ಚಿನಲ್ಲಿ ಗಣನೀಯ ಉಳಿತಾಯವಾಗಲಿದೆ. ಈಗಾಗಲೇ ಲಭ್ಯವಿರುವ ಆಂತರಿಕ ಸೌಲಭ್ಯ ಮತ್ತು ಜನ ಶಕ್ತಿಯನ್ನು ಬಳಸಿಕೊಂಡು ಯೋಗ್ಯ ದರದಲ್ಲಿ ಹೆಚ್ಚಿನ ಸಕ್ಕರೆ, ಹೆಚ್ಚಿನ ವಿದ್ಯುತ್ ಹಾಗೂ ಮದ್ಯಸಾರವನ್ನು ಉತ್ಪಾದನೆ ಮಾಡಬಹುದಾಗಿದೆ. ಆದ್ದರಿಂದ ಉದ್ದೇಶಿತ ಸಕ್ಕರೆ ಕಾರ್ಖಾನೆಯ ನುರಿಸುವ ಸಾಮರ್ಥ್ಯದ ವಿಸ್ತೀರ್ಣ, ಸಹ ವಿದ್ಯುತ್ ಘಟಕದ ಸಾಮರ್ಥ್ಯದ ವಿಸ್ತೀರ್ಣ ಹಾಗೂ ಮದ್ಯಸಾರ ಘಟಕದ ಸಾಮರ್ಥ್ಯದ ವಿಸ್ತೀರ್ಣ ಸರಿಯಾದ ಪರ್ಯಾಯ ಕ್ರಮವಾಗಿದೆ. ಉದ್ದೇಶಿತ ಘಟಕಗಳ ವಿಸ್ತೀರ್ಣದಿಂದ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ನಾಂದಿಯಾಗಲಿದ್ದು, ಪೂರಕವಾದ ಸಣ್ಣ ಪ್ರಮಾಣದ ಉದ್ದಿಮೆಗಳ ಸಂಖ್ಯೆಯು ಏರುಮುಖವಾಗಬಹುದಾಗಿದೆ. ಇದರಿಂದ ಸ್ಥಳೀಯ ಪರಿಣಿತ ಮತ್ತು ಅಪರಿಣಿತ ಕೆಲಸಗಾರರಿಗೆ ಹೆಚ್ಚಿನ ಉದ್ಯೋಗಾವಕಾಶಗಳನ್ನು ಕಲ್ಪಿಸಿದಂತಾಗುತ್ತದೆ.

ಮೇಲ್ಕಂಡ ಗಮನಾರ್ಹವಾದ ವೈಶಿಷ್ಟ್ಯಗಳಿಂದ ಸಕ್ಕರೆ ಕಾರ್ಖಾನೆ ಇವರು ಉದ್ದೇಶಿಸುತ್ತಿರುವ ಮದ್ಯಸಾರ ಘಟಕದ ಸಾಮರ್ಥ್ಯದ ವಿಸ್ತೀರ್ಣ, ಕಬ್ಬು ನುರಿಸುವ ಸಾಮರ್ಥ್ಯದ ವಿಸ್ತೀರ್ಣ ಹಾಗೂ ಸಹ ವಿದ್ಯುತ್ ಘಟಕದ ಸಾಮರ್ಥ್ಯದ ವಿಸ್ತೀರ್ಣದ ಯೋಜನೆಗಳು ಪರಿಸರ ವಿಮೋಚನೆಗೆ ಅರ್ಹವಾಗಿವೆ.